**ಕಥೆ**

ಉಳಿದುಕೊಂಡು ಸೋಮವಾರ ಅಲ್ಲಿಂದ ನೇರವಾಗಿ ಏರ್‌ಪೋರ್ಟ್‌ಗೆ ಬರಲೂ ವ್ಯವಸ್ಥೆಯಾಗುತ್ತದೆ. ಅದೂ ನೀವು ಮನಪೂರ್ವಕವಾಗಿ ಒಪ್ಪಿದಲ್ಲಿ ಮಾತ್ರ' ಸಂಕೋಚವಾಗಿಯೇ ಕೇಳಿದ್ದ. 'ಓಕೆ, ಆಗಬಹುದು. ನಾನು ನಾಲ್ಕು ವರ್ಷಗಳಿಂದ ಒಂದು ದಿನವೂ ಲೀವ್ ತೆಗೆದುಕೊಂಡವಳಲ್ಲ' ತಕ್ಷಣ ಒಪ್ಪಿದ್ದಳು. ಆದರೆ ಅವಳಲ್ಲಿ ಅಂಥ ಸಂಭ್ರಮವೇನೂ ಅವನಿಗೆ ಕಾಣಲಿಲ್ಲ. ಒಂದು ರೀತಿಯ ವಿಷಾದ ಭಾವ ಅವಳ ಮುಖದಲ್ಲಿ ಮನೆಮಾಡಿತ್ತು.

ವೆಸ್ಟ್ ಎಂಡ್ ಹೋಟೆಲಿನ ಪೂಲ್ ಪಕ್ಕದ ಗಾರ್ಡನ್‌ನಲ್ಲಿ ಪ್ರತ್ಯೇಕವಾಗಿ ಹಾಕಿದ್ದ ಟೇಬಲ್ಲಿನಲ್ಲಿ ಸಿದ್ಧಾರ್ಥ ಕುಮಾರ್ ಮತ್ತು ಸ್ಮಿತಾ ಶರ್ವಾಣಿ ಎದುರು ಬದರು ಕುಳಿತಿದ್ದರು. ಅವನಿಗಾಗಿ ಅವಳು ತಂದಿದ್ದ ತಾಜಾ ಕೆಂಪು ಗುಲಾಬಿ ಹೂವಿನ ಗುಚ್ಛ ಟೇಬಲ್ಲಿನ ಮೇಲಿತ್ತು. ಹೂಗುಚ್ಛ ಕೊಟ್ಟವಳು ಶುಭಾಶಯಗಳನ್ನೇನೂ ಹೇಳಿರಲಿಲ್ಲ. ಅವನು ಇದೇ ಮೊದಲ ಬಾರಿ ವೈನ್ ಕುಡಿಯುತ್ತಿದ್ದರಿಂದ ಆರ್ಗ್ಯಾನಿಕ್ ರೆಡ್ ವೈನ್ ಆರ್ಡರ್ ಮಾಡಿದ್ದ. ಸ್ಮಿತಾ ಶರ್ವಾಣಿಗೆ ರೆಗ್ಯುಲರ್ ಆಗಿ ವೈನ್ ಕುಡಿಯುವ ಅಭ್ಯಾಸವಿತ್ತು. 'ನನ್ನ ಆಹ್ವಾನವನ್ನು ಮನ್ನಿಸಿ ಬಂದಿದ್ದೀರಿ. ಮಗಳು ಲಂಡನ್ನಿನಲ್ಲಿ ಸ್ಟಡಿ ಮಾಡುತ್ತಿದ್ದಾಳೆಂದೂ ಹಾಗಾಗಿ ಒಬ್ಬಳೇ ಇರುತ್ತೀರೆಂದು ಹೇಳಿದ್ದಿರಿ ಮುಂಬಯಿಯ ನಮ್ಮ ಆಫೀಸಿಗೆ ಬಂದಾಗ. ಹಾಗಾಗಿ ನಿಮ್ಮ ಬಗ್ಗೆ ಕುತೂಹಲ ಹುಟ್ಟಿತು. ಅಂದು ಹೊರಡುವಾಗ ಏನೋ ಹೇಳಲು ಹೋದವರು ನಿಲ್ಲಿಸಿ ಮತ್ತೊಮ್ಮೆ ಸಿಕ್ಕಾಗ ಹೇಳುವೆನೆಂದಿರಿ. ನೀವು ಫಿಸಿಕಲಿ ಬಾದರ್ಡ್ ಅದರೆ ನಾನು ಮೆಂಟಲಿ ಬಾದರ್ಡ್ ಎಂದೂ ನನಗೆ ಹೇಳಿದ್ದಿರಿ. ಮತ್ತೆ ಮೊನ್ನೆ ಮುಂಬಯಿಯಿಂದ ಬೆಂಗಳೂರಿಗೆ ಬರುವಾಗ ನಯಾಗರದ ಬಗ್ಗೆ ಹೇಳಿದಾಗ ಸಡನ್ ಆಗಿ ಡಿಪ್ರೆಸ್ ಆಗಿಬಿಟ್ಟಿರಿ. ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯನ್ನೂ ಯಾವುದಾದರೊಂದು ನೋವು ಕಾಡುತ್ತಿರುತ್ತದೆ. ನನ್ನ ಮನೆಯವರಿಗೆ ಬಿಟ್ಟು ನನ್ನ ಆರೋಗ್ಯದ ಬಗ್ಗೆ ಬೇರೆ ಯಾರಿಗೂ ತಿಳಿದಿರಲಿಲ್ಲ. ಏಕೋ ನಿಮಗೆ ತಿಳಿಸಬೇಕೆನಿಸಿತು ತಿಳಿಸಿದೆ. ಮತ್ತು ನಾನು ಟ್ರೀಟ್‌ಮೆಂಟಿಗೆಂದು ಟೊರೆಂಟೊಗೆ ಹೋಗಲು ನೀವೇ ಕಾರಣ. ನನ್ನಲ್ಲೀಗ ಕಾನ್ಫಿಡೆನ್ಸ್ ಬಿಲ್ಡ್ ಆಗಿದೆ' ಅತ್ಯಂತ ಸಾವಧಾನವಾಗಿ ಮಾತನಾಡಿದ್ದ. 'ಹೌದು, ಈ ಜಗತ್ತಿನಲ್ಲಿ ಯಾವುದು ನಿಜವಾದ ಪ್ರೀತಿ, ಯಾವುದು ಆಕರ್ಷಣೆ, ಯಾವುದು ದೈಹಿಕ ವಾಂಛೆ, ಯಾವುದು ಭ್ರಮೆ ಎಂಬ ಸತ್ಯವನ್ನು ತಿಳಿಯುವ ಹೊತ್ತಿಗೆ ನಾನೊಂದು ಘನಘೋರವಾದ ತಪ್ಪು ಮಾಡಿಬಿಟ್ಟೆ. ನನ್ನ ಮಗಳು ಥೇಟ್ ನನ್ನ ಅಮ್ಮನ ಥರವೇ ತುಂಬಾ ಸುಂದರಿ. ಹಾಗಾಗಿ ಅವಳ ಜೊತೆ ಇರಲು ಎಷ್ಟು ಪ್ರಯತ್ನಪಟ್ಟರೂ ನನ್ನಿಂದ ಸಾಧ್ಯವಾಗುತ್ತಿಲ್ಲ. ಆದ್ದರಿಂದಲೇ ಅವಳನ್ನು ದೂರದ ಲಂಡನ್ನಿನಲ್ಲಿ ಬಿಟ್ಟು ಓದಿಸುತ್ತಿದ್ದೇನೆ. ಮನುಷ್ಯನ ಕೆಲವು ಸಂಬಂಧಗಳಿಗೆ ಅರ್ಥವೇ ಇರುವುದಿಲ್ಲ' ಅವಳು ಈಗ ಭಾವುಕಳಾಗಿದ್ದಳು. 'ಅರ್ಥವಾಗಲಿಲ್ಲ ನನಗೆ' ಎಂದನವನು. 'ಯಾರಿಗೂ ಅರ್ಥವಾಗಿಸುವುದು ಬೇಡ ಎಂದುಕೊಂಡಿದ್ದೆ. ಆದರೆ ನಿಮ್ಮೊಂದಿಗೀಗ ಎಲ್ಲವೂ ಹೇಳಿಕೊಳ್ಳಬೇಕೆನಿಸುತ್ತಿದೆ. ಪ್ರೀತಿಯಿಂದ ಹೆತ್ತು ಹೊತ್ತು ಬೆಳೆಸಿದ ಅಮ್ಮನ ಸಾವಿಗೆ ನಾನೇ ಕಾರಣಳಾಗಿಬಿಟ್ಟೆ. ಅಮ್ಮ ನಯಾಗರ ಜಲಪಾತಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು' ಅವಳು ಒಂದು ಪೆಗ್ ವೈನ್ ಖಾಲಿಮಾಡಿ, ಇನ್ನೊಂದು ಪೆಗ್ ಗ್ಲಾಸಿಗೆ ಬಗ್ಗಿಸಿಕೊಳ್ಳುತ್ತಾ ಹೇಳಿದ್ದಳು. 'ದೇವರೇ' ಬೆಚ್ಚಿ ಬಿದ್ದು ಉದ್ಗರಿಸಿದ್ದ ಸಿದ್ಧಾರ್ಥ ಕುಮಾರ್. 'ಹೌದು, ಅಮ್ಮನೂ ಗಗನಸಖಿಯಾಗಿದ್ದವಳು. ಸಾಫ್ಟ್‌ವೇರ್ ಕಂಪನಿಯೊಂದರ ಸಿಇಒ ಜೊತೆ ಮದುವೆಯಾಗಿ ಕೆಲಸ ಬಿಟ್ಟಳಂತೆ. ಎರಡು ವರ್ಷದಲ್ಲೇ ನಾನು ಹುಟ್ಟಿದ್ದೆ. ನಾನು ಹುಟ್ಟಿದ ಸರಿಯಾಗಿ ಒಂದು ತಿಂಗಳಿಗೆ ಅಪ್ಪನಿಗೆ ಮ್ಯಾಸೀವ್ ಹಾರ್ಟ್ ಅಟ್ಯಾಕ್ ಆಗಿ ಕಂಪನಿಯ ತನ್ನ ಚೇಂಬರ್‌ನಲ್ಲಿ ಸಾವನ್ನಪಿದ್ದನಂತೆ. ಅಪ್ಪನ ಕಂಪನಿ ಅಮ್ಮನಿಗೆ ಕೆಲಸ ಕೊಡಲು ಮುಂದಾದರೂ ಅಮ್ಮ ಅದನ್ನು ಒಪ್ಪದೆ ಗಗನಸಖಿ ಕೆಲಸಕ್ಕೆ ಹಿಂತಿರುಗಿದ್ದಳು. ನಾನು ಅಜ್ಜಿಯ ನೆರಳಲ್ಲಿ ಬೆಳೆಯತೊಡಗಿದೆ. ಅಮ್ಮ ತನ್ನ ಕೆಲಸದ ನಡುವೆಯೂ ಪ್ರೀತಿಯಿಂದ ನನ್ನ ಬಗ್ಗೆ ಇನ್ನಿಲ್ಲದ ಕಾಳಜಿ ತೋರುತ್ತಿದ್ದಳು. ನಾನು ಹೈಸ್ಕೂಲು ತೇರ್ಗಡೆಯಾದ ಸಂದರ್ಭದಲ್ಲಿ ಅಮ್ಮ ತನಗಿಂತಲೂ ಐದು ವರ್ಷ ಚಿಕ್ಕವನಾದ ಶ್ರೀಮಂತ ಉದ್ಯಮಿ ಸೂರಜ್ ಅಗರವಾಲ್ ಎಂಬಾತನೊಂದಿಗೆ ಮರು ಮದುವೆಯಾಗಲು ನಿರ್ಧರಿಸಿದಳು. ನನ್ನ ಅಭಿಪ್ರಾಯವನ್ನೂ ಕೇಳಿದ್ದಳು. ನಾನು ಸಂತೋಷದಿಂದಲೇ ಒಪ್ಪಿದೆ. ಮದುವೆಯಾದ ಮೇಲೆ ಅಮ್ಮ ಗಗನಸಖಿ ಕೆಲಸ ಬಿಟ್ಟು ಫ್ಯಾಷನ್ ಡಿಸೈನಿಂಗ್